ಕುಣಿಗಲ್ ತಾಲ್ಲೂಕು ಕೆಂಪನಹಳ್ಳಿ ರೇಷ್ಮೆ ಮಾರುಕಟ್ಟೆ

505 - ಶ್ರೀ ಎಸ್. ಪಿ. ಮುದ್ದುಹನುಮೇಗೌಡ (ಕುಣಿಗಲ್) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಣಿಗಲ್ ತಾಲ್ಲೂಕು ಕೆಂಪನಹಳ್ಳಿ ರೇಷ್ಮೆ ಮಾರುಕಟ್ಟೆಯಲ್ಲಿನ ಪ್ರದೇಶದಲ್ಲಿ ರೇಷ್ಮೆ ಕೃಷಿ ದಿನೇ ದಿನೇ ಕ್ಷೀಣಿಸುತ್ತಿರುವುದು ನಿಜವೇ*

ಆ) *ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಇ) *ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರದ ಕ್ರಮವೇನು?*

ಶ್ರೀ ಡಿ ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರೇಷ್ಮೆ ಬಿತ್ತನ ವಲಯದಲ್ಲಿನ ಮಾರುಕಟ್ಟೆಗಳ ಬಗ್ಗೆ

506- ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ರೇಷ್ಮೆಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಬಿತ್ತನೆ ವಲಯದಲ್ಲಿನ ಎಲ್ಲಾ ಮಾರುಕಟ್ಟೆಗಳಿಗೂ ಸರ್ಕಾರವು ಬಿತ್ತನೆ ಗೂಡಿಗಾಗಿ ಸಮಾನಾಂತರ ಬೇಡಿಕೆ ಸಲ್ಲಿಸುತ್ತಿದೆಯೇ?*

ಆ) *ಎಲ್ಲಾ ಮಾರುಕಟ್ಟೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ಸರ್ಕಾರದ ಬೇಡಿಕೆ ಎಷ್ಟಷ್ಟು? ಈ ಬಗ್ಗೆ ಪೂರ್ಣ ವಿವರ ನೀಡುವದು*

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಮಿಶ್ರತಳಿ ಪ್ರದೇಶದ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರೇಷ್ಮೆ ಬೆಳೆಗಾರರ ಗೂಡಿನ ಗುಣಮಟ್ಟ ಹಾಗೂ ಉತ್ಪಾದನೆ ಮೇಲೆ ಬೇಡಿಕೆ ನೀಡಲಾಗುತ್ತಿದೆ.

ಆ) ಅನುಬಂಧ (1) ರಲ್ಲಿ ವಿವರವನ್ನು ಒದಗಿಸಿದೆ.